ಸಿ ಸಿ ನಂ. 1035 /2017

ಸಾಕ್ಷಿಗೆ ದಿನಾಂಕ 25-11-2022 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

| | | |
|---|---|---|
| ಹೆಸರು | : | ವಸಂತಮ್ಮ |
| ಗಂಡನ ಹೆಸರು | : | ವೀರಬಸಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಏಣಗಿ ಬಸಾಪುರ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-4 ನನ್ನ ಗಂಡ, ಚಾಸಾ-5 ಮತ್ತು 6 ನನ್ನ ಮಕ್ಕಳು, 1 ನೇ ಆರೋಪಿ ನನ್ನ ಮಾವ, 2 ರಿಂದ 4 ನೇ ಆರೋಪಿತರು ನನ್ನ ಮಾವನ ಮಕ್ಕಳು, 5 ನೇ ಆರೋಪಿ ನನ್ನ ಅತ್ತೆ, 6 ನೇ ಆರೋಪಿ ನನ್ನ ಸಂಬಂಧಿಕರು.

ನನ್ನ ಗಂಡನ ತಂದೆಯ ಹೆಸರಿನಲ್ಲಿ ಏಣಗಿ ಬಸಾಪುರ ಗ್ರಾಮದಲ್ಲಿ 2 ಎಕರೆ 70 ಸೆಂಟ್ಸ ಜಮೀನು ಇರುತ್ತದೆ. ಹೊಲದ ಸಂಬಂಧ ನನ್ನ ಮತ್ತು ಆರೋಪಿತರ ನಡುವೆ ಜಗಳವಾಗಿತ್ತು. ನಾನು ಆ ದಿನ ಕರು ಬಿಟ್ಟು ಹಾಲು ಹಾಕುತ್ತಿದ್ದೆ ಆಗ ಆರೋಪಿತರು ಬಂದು ಜಗಳವನ್ನು ತೆಗೆದರು. ಆಗ 3 ಮತ್ತು 4 ನೇ ಆರೋಪಿತರು ನನ್ನ ಮಗ ಚಾಸಾ-5 ರವರನ್ನು ಕೈಮುರಿಯುವ ಹಾಗೆ ಕೋಲನ್ನು ಮತ್ತು ಕಲ್ಲನ್ನು ತೆಗೆದುಕೊಂಡು ಹೊಡೆದರು. ಆ ನಂತರ ಹಂಪಸಾಗರ ಪೊಲೀಸ್ ಠಾಣೆಗೆ ಹೋಗಿದ್ದು ಆವರು ತಂಬ್ರಹಳ್ಳಿ ಪೊಲೀಸ್ ಠಾಣೆಗೆ ಹೋಗುವಂತೆ ತಿಳಿಸಿದರು. ನಮ್ಮ ಊರಿನ ಯಜಮಾನರು ನನ್ನ ಮಗನನ್ನು ಆಂಬ್ಯುಲೆನ್ಸನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಾವು ಠಾಣೆಯಲ್ಲಿ ದೂರನ್ನು ಕೊಟ್ಟೆವು. ಸಾಕ್ಷಿಗೆ ನ್ಯಾಯಾಲಯದ ಸಮಕ್ಷಮದಲ್ಲಿರುವ ಒಂದು ಕಟ್ಟಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ-1 ಎಂದು ಗುರುತಿಸಲಾಯಿತು.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿದ್ದು ಪಾಟೀಸವಾಲಿಗೆ ಅನುಮತಿಯನ್ನು ಕೇಳಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ನನ್ನ ಮಾವ ಬಸಪ್ಪನಿಗೆ ಇಬ್ಬರು ಗಂಡು ಮಕ್ಕಳು ಎಂದರೆ ಸರಿ ಅವರೆಂದರೆ ವೀರಣ್ಣ ಮತ್ತು ಚಾಸಾ-4 ನನ್ನ ಗಂಡ ಎಂದರೆ ಸರಿ. ನನ್ನ ಮಾವನ ಹೆಸರಿನಲ್ಲಿ 11 ಎಕರೆ 50 ಸೆಂಟ್ಸ ಜಮೀನು ಇರುತ್ತದೆಂದರೆ ಸರಿ. ಅದರಲ್ಲಿ 6 ಎಕರೆ 22 ಸೆಂಟ್ಸ ಜಮೀನನ್ನು 1 ನೇ ಆರೋಪಿ ತನ್ನ ಹೆಸರಿನಲ್ಲಿ ಮಾಡಿಕೊಂಡಿರುತ್ತಾನೆಂದರೆ ಸರಿ. ನನ್ನ ಮಾವನ ಹೆಸರಿನಲ್ಲಿ 5 ಎಕರೆ 32 ಸೆಂಟ್ಸ ಸ್ವತ್ತಿನಲ್ಲಿ ನನ್ನ ಗಂಡನ ಭಾಗವು 2 ಎಕರೆ 71 ಸೆಂಟ್ಸ ಜಮೀನು 6 ನೇ ಆರೋಪಿತನ ಹೆಸರಿನಲ್ಲಿರುತ್ತದೆಂದರೆ ಸರಿ. ಸದರಿ ಜಮೀನನ್ನು ನಾವು ಸಾಗು ಮಾಡಿಕೊಂಡು ಬಂದಿರುತ್ತೇವೆಂದರೆ ಸರಿ. ನನ್ನ ಮಾವ ಮತ್ತು ನನ್ನ ಗಂಡನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲವೆಂದರೆ ಸರಿ. ಸದರಿ ಆಸ್ತಿಯನ್ನು ನನ್ನ ಗಂಡನ ಹೆಸರಿನಲ್ಲಿ ಮಾಡಿಸುವಂತೆ 1 ಮತ್ತು 2 ನೇ ಆರೋಪಿತರ ಬಳಿ ಹಲವಾರು ಬಳಿ ಕೇಳಿದರೂ ಮಾಡಿಕೊಟ್ಟಿರುವುದಿಲ್ಲವೆಂದರೆ ಸರಿ. ಇದೇ ಸಂಬಂಧ ದಿಃ 20-03-2017 ರಂದು ಸಂಜೆ 5 ಗಂಟೆ ಸುಮಾರಿಗೆ 6 ನೇ ಆರೋಪಿಯು ಸದರಿ ಹೊಲದಲ್ಲಿ ಬೆಳೆದಂತಹ ನೇಪಿಯಾರ್ ಸೊಪ್ಪೆಯನ್ನು ಕಟಾವು ಮಾಡಬಾರದೆಂದು ಸದರಿ ಆಸ್ತಿಯು ಆತನಿಗೆ ಸೇರಿದಂತಹ ಆಸ್ತಿ ಎಂದು ಹೇಳುತ್ತಿರುವಾಗ 1 ನೇ ಆರೋಪಿಯು ಮತ್ತು ಆತನ ಮಕ್ಕಳಾದ 2 ಮತ್ತು 3 ನೇ ಆರೋಪಿತರು ನನ್ನ ಮಗ ಚಾಸಾ-5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕಟ್ಟಿಗೆಯಿಂದ ಬಲಮೊಣಕೈಗೆ ಹೊಡೆದು ಒಳಪೆಟ್ಟು ಮಾಡಿದ್ದು 3 ನೇ ಆರೋಪಿಯು ತನ್ನ ಕೈಯಿಂದ ಮೂಗಿಗೆ ಹೊಡೆದು ರಕ್ತಗಾಯಪಡಿಸಿರುತ್ತಾನೆಂದರೆ ಸರಿ. ಬಿಡಿಸಲು ಬಂದು ಚಾಸಾ-4 ನನ್ನ ಗಂಡನಿಗೆ 1 ನೇ ಆರೋಪಿ ತನ್ನ ಕೈಯಿಂದ ಮೈಕೈಗೆ ಹೊಡೆದಿದ್ದು, 5 ನೇ ಆರೋಪಿತಳು ನನ್ನ ಕೂದಲನ್ನು ಹಿಡಿದು ಎಳೆದಾಡಿ ನನ್ನ ಕೊರಳಲ್ಲಿದ್ದ ತಾಳಿ

ಸರವನ್ನು ಹರಿದು ಹಾಕಿರುತ್ತಾರೆಂದರೆ ಸರಿ. ಸದರಿಯವರು ನನ್ನ ಮಕ್ಕಳಾದ ಚಾಸಾ-5 ಮತ್ತು 6 ರವರಿಗೆ 3 ಮತ್ತು 4 ನೇ ಆರೋಪಿತರು ಕೈಗಳಿಂದ ಮೈಕೈಗೆ ಹೊಡೆದಿರುತ್ತಾರೆಂದರೆ ಸರಿ. ಆ ನಂತರ ಸದರಿ ಜಗಳವನ್ನು ಚಾಸಾ-7 ರಿಂದ 9 ರವರು ಜಗಳವನ್ನು ಬಿಡಿಸಿರುತ್ತಾರೆಂದರೆ ಸರಿ. ಆದರೂ 1 ನೇ ಆರೋಪಿಯು ನನಗೆ ಜೀವಬೆದರಿಕೆಯನ್ನು ಹಾಕಿರುತ್ತಾರೆಂದರೆ ಸರಿ. ಗಾಯಗೊಂಡ ನನ್ನ ಮಗ ಚಾಸಾ-5 ರವರನ್ನು ನಾನು ಮತ್ತು ಚಾಸಾ-4 ಮತ್ತು 6 ರವರು ಸೇರಿ ಉಪಚರಿಸಿ ಮೋಟಾರು ಸೈಕಲ್ಲಿನಲ್ಲಿ ಹಂಪಸಾಗರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆಂದರೆ ಸರಿ. ಆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ-4 ನನ್ನ ಗಂಡ ಮತ್ತು ಮಗನನ್ನು 108 ಅಂಬ್ಯುಲೆನ್ಸನಲ್ಲಿ ಹೊಸಪೇಟೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಚಾಸಾ-6 ರವರಿಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆಂದರೆ ಸರಿ. ನಾನು ಈ ಬಗ್ಗೆ 1 ರಿಂದ 6 ನೇ ಆರೋಪಿತರ ವಿರುದ್ದ ದೂರನ್ನು ಕೊಟ್ಟಿರುತ್ತೇನೆಂದರೆ ಸರಿ.

ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಹಾಗೂ ಸಹಿಯನ್ನು ನಿಪಿ-1(ಎ) ಎಂದು, ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಹಾಗೂ ಸಹಿಯನ್ನು ನಿಪಿ-2(ಎ) ಎಂದು, ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಹಾಗೂ ಸಹಿಯನ್ನು ನಿಪಿ-3(ಎ) ಎಂದು, ಭಾವಚಿತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು.

ಪಾಟೀ ಸವಾಲು. 1 ರಿಂದ 5 ನೇ ಆರೋಪಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ-

ನನ್ನ ಮದುವೆಯಾದ ನಂತರ ನಮ್ಮ ಮಾವನವರಿಗೆ ಒಟ್ಟು 11 ಎಕರೆ ಜಮೀನು ಇರುತ್ತದೆಂದು ನನಗೆ ಗೊತ್ತಿರುತ್ತದೆ ಅದನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ಇಲ್ಲ.

ನನ್ನ ಮದುವೆಯಾಗುವವರೆಗೂ ಆರೋಪಿತರು ಮತ್ತು ನನ್ನ ಗಂಡ ಚಾಸಾ-4 ರವರ ನಡುವೆ ವಿಭಾಗವಾಗಿರುವುದಿಲ್ಲ. ನನ್ನ ಮದುವೆಯ ನಂತರ ಯಾವಾಗ ಪಾಲುವಿಭಾಗವಾಗಿರುತ್ತದೆಂದು ನನಗೆ ಹೇಳಲು ಬರುವುದಿಲ್ಲ ಏಕೆಂದರೆ ನಾನು ಅನಕ್ಷರಸ್ಥೆ ಇರುತ್ತೇನೆ. ನಿಪಿ-1 ರ ದೂರಿನಲ್ಲಿ ಏನು ಬರೆಯಲಾಗಿರುತ್ತದೆಂದು ನನಗೆ ಗೊತ್ತಿರುವುದಿಲ್ಲವೆಂದರೆ ಸರಿ ಸಾಕ್ಷಿ ಮುಂದುವರೆದು ನನಗೆ ಓದು ಬರಹ ಬರುವುದಿಲ್ಲವೆಂದು ನುಡಿಯುತ್ತಾರೆ. ನನ್ನ ಮಾವ ಬಸಪ್ಪನವರ ಹೆಸರಿನಲ್ಲಿ 2 ಎಕರೆ 71 ಸೆಂಟ್ಸ ಜಮೀನನ್ನು ಯಾರು ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ, ಸದರಿ ಜಮೀನನ್ನು ಇವತ್ತಿಗೂ 6 ನೇ ಆರೋಪಿಯು ಉಳುಮೆ ಮಾಡುತ್ತಾರೆಂದರೆ ಸರಿ. ಸದರಿ ಜಮೀನಿನಲ್ಲಿ ಗಲಾಟೆಯಾಗಿದೆ ಎಂದು ಹೇಳಿದ ದಿನ 6 ನೇ ಆರೋಪಿಯು ನೇಪಿಯಾರ್ ಸೊಪ್ಪೆಯನ್ನು ಬೆಳೆದಿದ್ದರು ಎಂದರೆ ಸರಿ. ಸದರಿ ಸೊಪ್ಪನ್ನು ನಾವು ಕಟಾವು ಮಾಡಿದ್ದು ಆ ವಿಷಯವನ್ನು 6 ನೇ ಆರೋಪಿಯು ನಮಗೆ ಕೇಳಿದ ಕಾರಣ ಜಗಳವಾಗಿರುತ್ತದೆಂದರೆ ಸರಿಯಲ್ಲ. 6 ನೇ ಆರೋಪಿತನಿಗೆ ಸದರಿ ಜಮೀನನ್ನು ನನ್ನ ಗಂಡ ಚಾಸಾ-3 ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ.

ಯಾವ ದಿನ ಸದರಿ ಜಮೀನನ್ನು ನನ್ನ ಗಂಡನ ಹೆಸರಿಗೆ ಮಾಡಿಕೊಡುವಂತೆ ನಾವು 6 ನೇ ಆರೋಪಿತನನ್ನು ಕೇಳಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಒಟ್ಟು 5 ಎಕರೆ 32 ಸೆಂಟ್ಸ ಸ್ವತ್ತು ನನ್ನ ಗಂಡನ ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನನ್ನು ನನ್ನ ಗಂಡನ ಹೆಸರಿಗೆ ಮಾಡಿಸಿಕೊಳ್ಳಲು ನಾವು ಮ್ಯುಟೇಶನ್ ಬದಲಾವಣೆಗಾಗಿ ಅರ್ಜಿಯನ್ನು ಕೊಟ್ಟಿರುವುದಿಲ್ಲ.

ಸದರಿ ಜಮೀನಿನ ಸಂಬಂಧ ಇದೇ ನ್ಯಾಯಾಲಯದಲ್ಲಿ ಆರೋಪಿತನ ವಿರುದ್ದ ಸಿವಿಲ್ ದಾವೆ ಸಲ್ಲಿಸಿರುತ್ತೇವೆಂದರೆ ಸರಿ. ಸದರಿ ದಾವೆಯಲ್ಲಿ ರಾಜೀ ಮಾಡಿಕೊಳ್ಳುವ ಸಂಬಂಧ ಆರೋಪಿತರ ವಿರುದ್ದ ನಾನು ಈ ಪ್ರಕರಣವನ್ನು ಸುಳ್ಳಾಗಿ ದಾಖಲು ಮಾಡಿದ್ದೇನೆಂದರೆ

ಸರಿಯಲ್ಲ. ನನ್ನ ಗಂಡನ ಅಣ್ಣನಾದ 1 ನೇ ಆರೋಪಿಯು ಸದರಿ ಜಮೀನನ್ನು ಖರ್ಚು ವೆಚ್ಚ ಕೊಟ್ಟು ತಮ್ಮ ಗಂಡನ ಹೆಸರಿಗೆ ಮಾಡಿಸಿಕೊಳ್ಳುವುದಾಗಿ ಹೇಳಿದ್ದರು ಎಂದರೆ ಸರಿಯಲ್ಲ. ರಾಜೀಯ ಸಂಬಂಧ ಸದರಿ ಸ್ವತ್ತಿನ ಬಗ್ಗೆ ನನ್ನ ಗಂಡ ಹಾಗೂ ಆರೋಪಿತರ ನಡುವೆ ಮಾತುಕತೆಯಾಗಿರುವ ಸಂಬಂಧ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡನು ಖರ್ಚು ಹಣವನ್ನು ಕೊಟ್ಟು ತನ್ನ ಹೆಸರಿಗೆ ಜಮೀನನ್ನು ಮಾಡಿಸಿಕೊಳ್ಳುವಂತೆ 1 ನೇ ಆರೋಪಿ ಹೇಳಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

2 ಮತ್ತು 4 ನೇ ಆರೋಪಿತರು ನನ್ನ ಮಗನಾದ ಚಾಸಾ-5 ರವರಿಗೆ ಬಲಗೈಗೆ ಹೊಡೆದಿರುತ್ತಾರೆ. 3 ನೇ ಆರೋಪಿಯು ನನ್ನ ಮಗನಿಗೆ ಮೂಗಿಗೆ ಹೊಡೆದರು. ಸದರಿ ಆರೋಪಿತರು ನನಗೆ ಮತ್ತು ನನ್ನ ಗಂಡನಿಗೆ ಹೊಡೆದಿದ್ದು ಯಾರು ಎಲ್ಲಿಗೆ ಹೊಡೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಮನೆಯ ಒಳಗಡೆ ನಾನು ಕರುವನ್ನು ಬಿಡುತ್ತಿದ್ದೆ ಎಂದರೆ ಸರಿ. ನನಗೆ ಯಾವ ವಿಷಯಕ್ಕೆ ಜಗಳ ಪ್ರಾರಂಭವಾಯಿತು ಎಂದು ನನಗೆ ಗೊತ್ತಿರುವುದಿಲ್ಲವೆಂದರೆ ಸರಿ. ಪೋಲೀಸರು ಕಲ್ಲನ್ನು ಜಪ್ತುಪಡಿಸಿಕೊಂಡು ಫೋಟೋ ತೆಗೆದಿರುತ್ತಾರೆ. ನಿಪಿ-2 ರ ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲವೆಂದರೆ ಸರಿ. ನನಗೆ 1 ರಿಂದ 6 ನೇ ಆರೋಪಿತರು ಹೊಡೆದಿರುವುದಿಲ್ಲ, ಸಿವಿಲ್ ವ್ಯಾಜ್ಯದ ಸಂಬಂಧ ಸದರಿ ಆರೋಪಿತರ ವಿರುದ್ಧ ಕೊಟ್ಟಿರುತ್ತೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು. 6 ನೇ ಆರೋಪಿ ಪರ ಶ್ರೀ ಕೆ ಪಿ ಕೆ ವಕೀಲರಿಂದಃ-</u>

ಜಗಳವಾದಾಗ 6 ನೇ ಆರೋಪಿ ಘಟನಾ ಸ್ಥಳದಲ್ಲಿ ಇರಲಿಲ್ಲವೆಂದರೆ ಸರಿ. 6 ನೇ ಆರೋಪಿತನ ಹೆಸರಿಗೆ ಬಂದತಂಹ ಸ್ವತ್ತು ಆತನ ಹೆಸರಿನಲ್ಲಿ, ನಮ್ಮ ಪಾಲಿಗೆ ಬಂದಂತಹ ಸ್ವತ್ತು ನಮ್ಮ ಹೆಸರಿನಲ್ಲಿ ಹಾಗೂ ನಮ್ಮ ಮಾವನ ಪಾಲಿಗೆ ಬಂದತಂಹ ಸ್ವತ್ತು ಆತನ

ಹೆಸರಿನಲ್ಲಿರುತ್ತದೆಂದರೆ ಸರಿ. 6 ನೇ ಆರೋಪಿತನಿಗೂ ಸದರಿ ಪ್ರಕರಣಕ್ಕೂ ಯಾವುದೇ ಸಂಬಂಧವಿರುವುದಿಲ್ಲವೆಂದರೆ ಸರಿ. ಸಾಕ್ಷಿ ಮುಂದುವರೆದು ಯಜಮಾನನೆಂದು ಆತನ ಹೆಸರನ್ನು ಪ್ರಕರಣದಲ್ಲಿ ಸೇರಿಸಿರುತ್ತೇವೆಂದು ನುಡಿಯುತ್ತಾರೆ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ